# ಜಗತ್ತಿನ ವರ್ತಮಾನ ಮತ್ತು ಭವಿಷ್ಯಕ್ಕೆ ಭಾರತ ಏನನ್ನು ಕೊಡಬಲ್ಲದು?



## ಅನಿಸಿಕೆ

**ಎಸ್.ಎನ್. ಬಾಲಗಂಗಾಧರ**
ಗೆಂಟ್ ವಿಶ್ವವಿದ್ಯಾಲಯ, ಬೆಲ್ಜಿಯಂ

ಜಗತ್ತಿನ ಆರ್ಥಿಕ ಮತ್ತು ರಾಜಕೀಯ ವಲಯಗಳಲ್ಲಿ ಭಾರತ ಇಂದು ತುಂಬಾ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದೆ. ಪ್ರಸ್ತುತ ಜಾಗತಿಕ, ಆರ್ಥಿಕ ಮತ್ತು ರಾಜಕೀಯ ಸಹಕಾರ ಕ್ಷೇತ್ರದಲ್ಲಿ ಭಾರತ ಮತ್ತು ಯೂರೋಪ್ ಸಹಭಾಗಿಗಳಾಗಿ ಮುಖಾಮುಖಿಯಾಗಿ ನಿಂತಿವೆ. ಈ ಬೆಳವಣಿಗೆಯಿಂದಾಗಿ ಭಾರತ ಮತ್ತು ಯೂರೋಪ್ ಕೆಲವು ಮಹತ್ವದ ಸವಾಲುಗಳನ್ನು ಎದುರಿಸಬೇಕಾಗಿ ಬಂದಿದೆ. ಭಾರತದ ಬೌದ್ಧಿಕವಲಯ, ವ್ಯಾಪಾರಿ ಪ್ರಪಂಚ, ರಾಜಕಾರಣಿಗಳು ಮತ್ತು ಶಿಕ್ಷಕರು ಉತ್ತರಿಸಲೇಬೇಕಾದ ಪ್ರಶ್ನೆ ಎಂದರೆ:''ವರ್ತಮಾನ ಹಾಗೂ ಭವಿಷ್ಯದಲ್ಲಿ ಜಗತ್ತಿಗೆ ಭಾರತ ಏನು ಕೊಡಬಲ್ಲದು?''

ಕಳೆದ 400-500 ವರ್ಷಗಳ ಮಾನವ ಜನಾಂಗದ ಬೆಳವಣಿಗೆಯ ಕುರಿತಾದ ಸಂಶೋಧನೆಯ ಇತಿಹಾಸದಲ್ಲಿ ಇದೆ ಮೊದಲ ಬಾರಿಗೆ ಬಿಳಿಯರು ಮತ್ತು ಕ್ರಿಶ್ಚಿಯನ್ನರಿಗೆ ಹೊರತಾದ ಸಂಸ್ಕೃತಿಗಳು ಮಹತ್ತರವಾದ ಪ್ರಭಾವವನ್ನು ಬೀರುತ್ತಿವೆ. ಈ ಪ್ರಕ್ರಿಯೆಯಲ್ಲಿ ಬುದ್ಧಿಜೀವಿಗಳು ಭಾರತವನ್ನು ಕುರಿತ ಯೂರೋಪಿನ ಚಿಂತನೆ, ಬರವಣಿಗೆ ಮತ್ತು ಅಭಿಪ್ರಾಯಗಳಿಗೆ ಪ್ರತಿಕ್ರಿಯಿಸುವ ದೊಡ್ಡ ಸವಾಲನ್ನು ಎದುರಿಸಬೇಕಿದೆ. ಏಕೆಂದರೆ ಕಳೆದ 300 ವರ್ಷಗಳಿಂದ ಭಾರತದ ಸಂಸ್ಕೃತಿಯ ಕುರಿತಾದ ಸಿದ್ಧಾಂತ ಹಾಗೂ ಪಠ್ಯಗಳನ್ನು ರಚಿಸಿದವರು ಯೂರೋಪಿಯನ್ನರು. ಅದಷ್ಟೆ ಆಗಿದ್ದರೆ ಅದೊಂದು ಗಂಭೀರವಾಗಿ ಪರಿಗಣಿಸಬೇಕಾದ ಸಮಸ್ಯೆಯಾಗುತ್ತಿರಲಿಲ್ಲ. ಇಂದು ನಮಗೆ ನಿಜಕ್ಕೂ ಸವಾಲಾಗಿರುವುದು ಭಾರತೀಯ ಸಂಸ್ಕೃತಿಯ ಕುರಿತ ಸಿದ್ಧಾಂತಗಳು ಮತ್ತು ನಮ್ಮ ಶಾಲಾ ಕಾಲೇಜುಗಳಲ್ಲಿ ಈಗಲೂ ಬೋಧಿಸುತ್ತಿರುವ ಪಠ್ಯ ಗಳ ರಚನೆಯಾಗಿರುವುದು ಯೂರೋಪಿಯನ್ನರ ಸಾಂಸ್ಕೃತಿಕ ಚೌಕಟ್ಟಿನಲ್ಲಿ ನಡೆದ ಅಧ್ಯಯನಗಳ ಆಧಾರದ ಮೇಲೆ ಎನ್ನುವ ಸಂಗತಿ.

ಮಾನವ ಜನಾಂಗವನ್ನು ಕುರಿತು ಇಂದು ಬಳಕೆಯಲ್ಲಿರುವ ಎಲ್ಲಾ ಆಸಕ್ತಿ ಪೂರ್ಣ ಸಿದ್ಧಾಂತಗಳು ಸಂಸ್ಕೃತಿ ಅಧ್ಯಯನಗಳು, ಸಾಮಾಜಿಕ ಸಿದ್ಧಾಂತಗಳು, ಯೂರೋಪಿನ ಬುದ್ಧಿಜೀವಿಗಳ ಕೊಡುಗೆಯಾಗಿದೆ. ಅದೇ ರೀತಿ ಇಂದು ನಾವು ಅತ್ಯಂತ ಮಹತ್ವವಾದುದೆಂದು ಪರಿಗಣಿಸುವ ಪ್ರಜಾಸತ್ತಾತ್ಮಕ ಸಂಸ್ಥೆ ಮತ್ತು ನ್ಯಾಯಾಂಗದಂತಹ ಸಂಸ್ಥೆಗಳು ಮತ್ತು ಆಚರಣೆಗಳೂ ಅವರ ಕೊಡುಗೆಗಳೆ.

ಹಾಗಾದರೆ ಇದೆ ಕಾಲಘಟ್ಟದಲ್ಲಿ ಭಾರತೀಯ ಚಿಂತಕರು ಮತ್ತು ಬುದ್ಧಿಜೀವಿಗಳು ಏನು ಮಾಡುತ್ತಿದ್ದರು? ಭಾರತದ ಹಲವಾರು ತಲೆಮಾರುಗಳ ಜನರು ಶಾಲಾ ಕಾಲೇಜುಗಳಲ್ಲಿ ತಾವು ಅಧ್ಯಯನ ಮಾಡಿದ ಪಠ್ಯಗಳಿಂದ ತಮ್ಮ ದೇಶ/ಸಂಸ್ಕೃತಿಯ ಬಗ್ಗೆ ತಿಳಿದುಕೊಂಡಿರುವ ಸಾಮಾನ್ಯ ಸಂಗತಿಗಳು ಹೀಗಿವೆ: ಭಾರತದಲ್ಲಿ ಜಾತಿ ವ್ಯವಸ್ಥೆ ಪ್ರಬಲವಾಗಿದೆ. ಇಲ್ಲಿ ಮಹಿಳೆಯರು ಶೋಷಣೆಗೊಳಗಾಗಿದ್ದಾರೆ, ಸತಿಸಹಗಮನ ಪದ್ಧತಿ ಅಸ್ತಿತ್ವದಲ್ಲಿದೆ, ಭ್ರಷ್ಟಾಚಾರ ಮಿತಿ ಮೀರಿದೆ, ಭಾರತದ ಬಹುಪಾಲು ಜನರು ಜ್ಯೋತಿಷ್ಯ ಕರ್ಮ, ಮತ್ತು ಪುನರ್ಜನ್ಮಗಳಂತಹ ಮೂಢನಂಬಿಕೆಗಳಲ್ಲಿ ಮುಳುಗಿದ್ದಾರೆ..ಇತ್ಯಾದಿ. ಭಾರತದ ಬಗೆಗಿನ ಈ ಚಿತ್ರಣ ನಿಜ ಎಂದಾದರೆ ಭಾರತೀಯ ಸಮಾಜ ಹಿಂದೆ ಮತ್ತು ಈಗಲೂ ಈ ಅನಿಷ್ಟಗಳನ್ನು ಒಳಗೊಂಡಿತ್ತು ಎನ್ನುವುದು ಸತ್ಯವಾಗಿದ್ದಲ್ಲಿ ನಮ್ಮ ಹಿಂದಿನ ತಲೆಮಾರಿನ ಭಾರತೀಯ ಚಿಂತಕರು ಯಾವ ರೀತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು ಎನ್ನುವ ಸಮಸ್ಯೆ ನಿಗೂಢವಾಗಿ ಉಳಿಯುವುದಿಲ್ಲ. ಬದಲಾಗಿ ಅದು ಭಾರತದ ಬಗ್ಗೆ ಅತ್ಯಂತ ವಿಷಾದಕರ ತಿಳಿವಳಿಕೆಯಾಗಿ ಬದಲಾಗುತ್ತದೆ.

ಕಾರಣವೆಂದರೆ: ಯೂರೋಪಿನಲ್ಲಿ ಬುದ್ಧಿಜೀವಿಗಳು ಇಡಿ ಜಗತ್ತಿಗೆ ಸವಾಲೆಸೆದು, ಅದನ್ನು ಬದಲಾಯಿಸುವ ಕಾರ್ಯದಲ್ಲಿ ತೊಡಗಿದ್ದ ಕಾಲದಲ್ಲಿ ಮತ್ತೊಂದು ಸಂಸ್ಕೃತಿಯ ಬಹುಸಂಖ್ಯೆಯ ಚಿಂತಕರು ಇಲ್ಲಿನ ಅನುಚಿತ ಆಚರಣೆಗಳನ್ನು ಉಳಿಸಿಕೊಳ್ಳುವಲ್ಲಿ ಮತ್ತು ಸಮರ್ಥಿಸಿಕೊಳ್ಳುವ ಕಾರ್ಯದಲ್ಲಿ ನಿರತರಾಗಿದ್ದರು ಎನ್ನುವ ತೀರ್ಮಾನಕ್ಕೆ ನಾವು ಬರದೆ ವಿಧಿಯಿಲ್ಲ. ಕೆಲವರು ಹೇಳುವಂತೆ ಭಾರತದಲ್ಲೂ ಬುದ್ಧ ಮತ್ತು ಗಾಂಧಿಯಂತಹ ಚಿಂತಕರಿದ್ದಾರೆ. ಆದರೆ ನಮಗಿರುವವರು ಅವರಿಬ್ಬರೇ, ಒಬ್ಬ ಬುದ್ಧ ಮತ್ತು ಒಬ್ಬ ಗಾಂಧಿ. ಹಾಗಾಗಿ ಭಾರತದಲ್ಲಿ ಇಂತಹ ಅನಿಷ್ಟ ಆಚರಣೆಗಳು ಸಾವಿರಾರು ವರ್ಷಗಳ ಕಾಲ ಅಬಾಧಿತವಾಗಿ ಮುಂದುವರೆದುಕೊಂಡು ಬಂದವು ಮತ್ತು ಅದನ್ನು ಸಮರ್ಥವಾಗಿ ಎದುರಿಸುವ ಚಿಂತನೆಗಳೇ ನಮ್ಮಲ್ಲಿ ಹುಟ್ಟಲಿಲ್ಲ. ಈ ಚಿತ್ರಣವೇ ಸತ್ಯವಾಗಿದ್ದಲ್ಲಿ, ಈಗ ಭಾರತೀಯರ ಮುಂದಿರುವುದು ಒಂದೇ ದಾರಿ: ಭಾರತವನ್ನು ಆಧುನೀಕರಣಗೊಳಿಸುವುದು! ಮತ್ತು ನಮ್ಮ ಸಂಸ್ಕೃತಿಗೆ ಇರುವುದು ಒಂದೇ ಉದ್ದೇಶ: ಆದಷ್ಟು ಬೇಗ ಅದು ಪಾಶ್ಚಾತ್ಯ ಸಂಸ್ಕೃತಿಯಾಗಿ ಪರಿವರ್ತನೆಗೊಳ್ಳುವುದು!

ಚಿತ್ರಣ ತಪ್ಪಾಗಿದ್ದರೆ? ಭಾರತ ಜಗತ್ತಿಗೆ ಏನನ್ನು ನೀಡಬಯಸುತ್ತದೆ ಮತ್ತು ಭಾರತೀಯರು ಎಂತಹ ಚಿಂತನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು ಎನ್ನುವ ಸಂಗತಿ ಭಾರತೀಯರಷ್ಟೆ ಯೂರೋಪಿಯನ್ನರಿಗೂ ಪ್ರಮುಖವಾಗುತ್ತದೆ. ಭಾರತದ ಕುರಿತಾದ ಜ್ಞಾನದ ಉತ್ಪಾದನೆ ಆಗಿರುವುದು ವಸಾಹತು ಕಾಲದಲ್ಲಿ. ಸ್ವಾತಂತ್ರ್ಯಾನಂತರ ಬಡತನ ಹಾಗೂ ಹಿಂದುಳಿದಿರುವಿಕೆಯಿಂದ ಈ ದೇಶ ಬಹಳ ಕಾಲ ಬಳಲಿತು. ಭಾರತದ ಕುರಿತಾದ ಯೂರೋಪಿನ ಜ್ಞಾನವನ್ನು ಒರೆಗೆ ಹಚ್ಚಬಹುದಾದ ಆತ್ಮವಿಶ್ವಾಸವಾಗಲಿ, ಅಗತ್ಯವಾಗಲಿ, ಪರಿಸ್ಥಿತಿಯಾಗಲಿ ಅಥವಾ ಸಂದರ್ಭವಾಗಲಿ ಭಾರತದ ಬುದ್ಧಿಜೀವಿಗಳಿಗೆ ಇದುವರೆಗೆ ಬಂದಿರಲಿಲ್ಲ. ಆದರೆ ಭಾರತದ ನಾಳಿನ ಬುದ್ಧಿಜೀವಿಗಳು ಭಾರತದ ಕುರಿತಾದ ಯೂರೋಪಿನ ಚಿತ್ರಣವನ್ನು ಪ್ರಶ್ನಿಸುವಷ್ಟರ ಮಟ್ಟಿಗಿನ ಹೊಸ ಆತ್ಮವಿಶ್ವಾಸವನ್ನು ಹೊಂದಿರುತ್ತಾರೆ. ಮೊದಲ ಬಾರಿಗೆ ಅವರು ಭಾರತದ ಕುರಿತಾಗಿನ ಯೂರೋಪಿನ ಜ್ಞಾನವನ್ನು ದೈವನಿಯಮಿತ ಸತ್ಯದಂತೆ ಒಪ್ಪಿಕೊಳ್ಳದೆ ಅದನ್ನು ಪರೀಕ್ಷೆಗೊಡ್ಡುತ್ತಾರೆ. ಇದಕ್ಕೂ ಮಿಗಿಲಾಗಿ ಈ ಪರೀಕ್ಷೆಯ ಫಲಿತಾಂಶ ಅವರಲ್ಲಿ ಕೇವಲ ವೈಜ್ಞಾನಿಕ ಆಸಕ್ತಿಯನ್ನು ಮಾತ್ರ ಕೆರಳಿಸುವುದಿಲ್ಲ. ಬದಲಾಗಿ ಅದು ಯೂರೋಪ್ ಸಮಾಜದಲ್ಲಿ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕವಾಗಿ ಗಂಭೀರ ಪರಿಣಾಮ ಬೀರುತ್ತದೆ.

ಜಾತಿ ವ್ಯವಸ್ಥೆಯನ್ನು ಆಚರಿಸುವಂತೆ ಒತ್ತಾಯ ಮಾಡಲು ಭಾರತದ ಉದ್ದಗಲಗಳಲ್ಲಿ ಯಾವುದೇ ಕೇಂದ್ರೀಕೃತ ಶಕ್ತಿ ಇಲ್ಲದಿರುವುದರಿಂದ ಜಾತಿಯನ್ನು ಒಂದು ಸ್ವಾಯತ್ತ ಮತ್ತು ವಿಕೇಂದ್ರೀಕೃತ ಸಂಘಟನೆ ಎಂದು ಕರೆಯಬಹುದು. ಬ್ರಿಟೀಷ್ ಮತ್ತು ಭಾರತೀಯರು ಜಾತಿ ವ್ಯವಸ್ಥೆಯ ನಿರ್ಮೂಲನೆಗೆ ಅನುಸರಿಸಿದ ಎಲ್ಲಾ ರೀತಿಯ ರಾಜಕೀಯ ಮತ್ತು ಸಾಮಾಜಿಕ ಕ್ರಮಗಳು ಜಾತಿ ವ್ಯವಸ್ಥೆಯನ್ನು ಕಿತ್ತೊಗೆಯಲು ವಿಫಲವಾಗಿವೆ ಎಂದಾದರೆ ಜಾತಿವ್ಯವಸ್ಥೆ ಎಂಬುದು ಸ್ವ-ಪುನರುತ್ಪಾದನಾ ಸಾಮರ್ಥ್ಯ ಹೊಂದಿರುವ ಸಾಮಾಜಿಕ ವಿನ್ಯಾಸವನ್ನು ಒಳಗೊಂಡಿದೆ ಎಂದಾಗುತ್ತದೆ. ಜಾತಿವ್ಯವಸ್ಥೆಯ ಲಕ್ಷಣಗಳನ್ನು ನಾವು ಹಿಂದೂ, ಸಿಕ್, ಜೈನ್, ಕ್ರಿಶ್ಚಿಯನ್ ಮತ್ತು ಮುಸ್ಲಿಂ ಎಲ್ಲರಲ್ಲಿಯೂ ಕಾಣಬಹುದು ಎಂದಾದರೆ ಜಾತಿವ್ಯವಸ್ಥೆಯು ಬೇರೆ ಬೇರೆ ಪರಿಸರಗಳಲ್ಲೂ ಅಸ್ತಿತ್ವವನ್ನು ಹೊಂದಬಲ್ಲದು ಎಂಬುದನ್ನು ಒಪ್ಪಬೇಕು. ಅಲ್ಲದೆ ನೂರಾರು ವರ್ಷಗಳಿಂದ ಹಲವು ಜಾತಿಗಳು ಬಂದು ಹೋಗಿವೆ ಎಂದಾದರೆ ಈ ವ್ಯವಸ್ಥೆಯು ನಿಂತ ನೀರಲ್ಲ ಬದಲಾಗಿ ಬದಲಾವಣೆಗೆ ಹೊಂದಿಕೊಳ್ಳುವಷ್ಟು ಚಲನಾತ್ಮಕತೆಯನ್ನು ಪಡೆದಿದೆ ಎಂದಾಯಿತು. ಇಲ್ಲಿಯವರೆಗೂ ಎಲ್ಲ ತರಹದ ರಾಜಕೀಯ ವ್ಯವಸ್ಥೆಗಳಲ್ಲೂ ಜಾತಿ ವ್ಯವಸ್ಥೆ ಇತ್ತು ಮತ್ತು ವಿಭಿನ್ನ ರಾಜಕೀಯ ಪ್ರಭುತ್ವಗಳಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ ಎಂದಾದಲ್ಲಿ ರಾಜಕೀಯ ತತ್ವಾದರ್ಶಗಳಿಗೆ ಸಂಬಂಧಿಸಿದಂತೆ ತಟಸ್ಥತೆಯನ್ನು ಕಾಯ್ದುಕೊಂಡಿದೆ ಎಂದಾಗುತ್ತದೆ.

ಭಾರತದಿಂದ ಕಲಿಯುವಂಥದ್ದು ಏನೂ ಇಲ್ಲ ಎನ್ನುವುದು ನಾವು ಯೋಚಿಸಬಹುದಾದ ಒಂದು ಸಾಧ್ಯತೆ. ತಾರ್ಕಿಕವಾಗಿ ಈ ಪರಿಸ್ಥಿತಿಯನ್ನು ಅಲ್ಲಗಳೆಯಲಾಗುವುದಿಲ್ಲವಾದರೂ ಸಾವಿರಾರು ವರ್ಷಗಳ ಇತಿಹಾಸವಿರುವ ಇಂದು ಸಂಸ್ಕೃತಿಯಿಂದ ಕಲಿಯಲು ಏನೂ ಇಲ್ಲ ಎನ್ನುವುದು ಅಸಂಭವನೀಯ. ಆದರೆ ನಾವು ಯೂರೋಪಿನವರಿಂದ ಸಾಕಷ್ಟು ಕಲಿತಿದ್ದೇವೆ ಹಾಗೂ ಕಲಿಯುವುದು ಇನ್ನೂ ಇದೆ ಎಂದು ನಂಬಿದ್ದೇವೆ. ಇದೊಂದು ವಿಪರ್ಯಾಸವೆ ಸರಿ. ಇಡೀ ವಿಶ್ವವನ್ನು ಮುನ್ನಡೆಸಲು ದೇವರು ತಮ್ಮನ್ನು ಆಯ್ಕೆ ಮಾಡಿಕೊಂಡಿದ್ದಾನೆ ಆದ್ದರಿಂದ ತಾವು 'ಆಯ್ಕೆಗೊಂಡ ಜನರು' ಎಂದು ಯಹೂದಿಗಳು ನಂಬಿದ್ದಾರೆ. ಅದೇ ರೀತಿ ಸಮಸ್ತ ಭೂಖಂಡದ ಸಂಸ್ಕೃತಿಗಳಲ್ಲಿ ಯೂರೋಪ್ ಸಹ ದೇವರಿಂದಲೇ 'ಆಯ್ಕೆಗೊಂಡ ಸಂಸ್ಕೃತಿ'ಯಾಗಿರುವ ಸಾಧ್ಯತೆಯೂ ಇದೆ. ಆದರೆ ಇದು ಸಂಭವನೀಯವಲ್ಲ. ಭಾರತದಿಂದ ಏನನ್ನೂ ಕಲಿಯುವಂತಿಲ್ಲ ಎಂದಾದರೆ ನಾವು ನಂಬಿರುವ ಈ ಜಗತ್ತಿನ ಗ್ರಹಿಕೆಗೆ ಯಾವದೇ ರೀತಿಯ ಕುಂದುಂಟಾಗುವುದಿಲ್ಲ.

ಇನ್ನು ಯೂರೋಪ್‌ಗೆ ಭಾರತದಿಂದ ಕಲಿಯುವುದು ಏನೋ ಇದೆ, ಆದರೆ ಅದು ಏನು ಎನ್ನುವುದು ಬಹಳಷ್ಟು ಯೂರೋಪಿಯನ್ನರಿಗೆ ಇನ್ನೂ ತಿಳಿದಿಲ್ಲ. ನೂರಾರು ವರ್ಷಗಳಿಂದ ಯೂರೋಪ್ ಭಾರತವನ್ನು ಅಧ್ಯಯನ ಮಾಡುತ್ತಿದೆ; ಭಾರತೀಯ ಭೂಪ್ರದೇಶ ಮತ್ತು ಅಲ್ಲಿನ ಜನರನ್ನು ತನ್ನ ವಸಾಹತುವನ್ನಾಗಿಸಿಕೊಂಡಿದೆ; ಅಲ್ಲದೆ ನೂರಾರು ವರ್ಷಗಳಿಂದ ಭಾರತೀಯರಿಗೆ ಅವರ ಸಮಾಜ ಮತ್ತು ಸಂಸ್ಕೃತಿಯಲ್ಲಿರುವ ತಪ್ಪುಗಳನ್ನು ತಿಳಿಹೇಳುತ್ತಾ ಬಂದಿದೆ. ಆದರೂ ಭಾರತದಿಂದ ತಾವೇನು ಕಲಿಯಬೇಕೆಂಬುದೇ ಯುರೋಪಿನವರಿಗೆ ಗೊತ್ತಿಲ್ಲ! ಆದರೆ, ಭಾರತೀಯರಿಗೆ ತಾವು ಯೂರೋಪ್‌ನಿಂದ ಕಲಿಯಬೇಕು ಎಂಬುದು ಗೊತ್ತಿದೆ. ಶತಮಾನಗಳಿಂದಲೂ ಅವರು ಅದನ್ನು ಕಲಿಯುತ್ತಲೇ ಬಂದಿದ್ದಾರೆ. ಈ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಎರಡನೆ ಸಾಧ್ಯತೆ ಅಂದರೆ, ಯೂರೋಪ್ ಭಾರತದಿಂದ ಏನನ್ನೋ ಕಲಿಯುವುದಿದೆ ಆದರೆ ಅದು ಏನು ಅನ್ನುವುದು ತಿಳಿದಿಲ್ಲ ಎನ್ನುವ ಅಂಶ ಆಳವಾಗಿ ನಮ್ಮ ಮನ ಕದಡುತ್ತದೆ. ಒಂದು ಸಂಸ್ಕೃತಿ - ಭಾರತ - ಹಲವು ಶತಮಾನ ಮತ್ತು ತಲೆಮಾರುಗಳಿಂದ ಕಲಿಯುತ್ತಲೇ ಬಂದಿದೆ. ಆದರೆ ಮತ್ತೊಂದು ಸಂಸ್ಕೃತಿಗೆ - ಯೂರೋಪ್ - ತಾನು ಏನನ್ನು ಕಲಿಯಬೇಕು ಅಥವಾ ಕಲಿಯುವುದಕ್ಕೆ ಏನಾದರು ಇದೆಯೇ ಎಂಬುದೇ ಗೊತ್ತಿಲ್ಲ! ಈ ಎರಡೂ ಸಂಸ್ಕೃತಿಗಳು ಶತಮಾನಗಳ ನಂತರ ಮೊದಲ ಬಾರಿಗೆ ಸಮಾನ ಸ್ಪರ್ಧಿಗಳಾಗಿ ಜಾಗತಿಕ ಅಖಾಡದಲ್ಲಿ ಎದುರಾಗಿ ನಿಲ್ಲುತ್ತಿವೆ.

ಕಳೆದ ಮುನ್ನೂರು ವರ್ಷಗಳಷ್ಟು ಕಾಲದಲ್ಲಿ ಭಾರತೀಯ ಚಿಂತಕರು ಮಾನವ ಜ್ಞಾನ ಮಿಮಾಂಸೆಗೆ ಯಾವುದೇ ಕೊಡುಗೆಗಳನ್ನು ಕೊಟ್ಟಿಲ್ಲವೇನೋ ಎನ್ನುವ ರೀತಿಯಲ್ಲಿ ಸಾಮಾಜಿಕ ವಿಜ್ಞಾನಗಳು ಮತ್ತು ಮಾನವಿಕ ಶಾಸ್ತ್ರಗಳ ಮುಖ್ಯವಾಹಿನಿಯ ಸಿದ್ಧಾಂತಗಳು ಮುಂದುವರೆಯುತ್ತಿವೆ. ಇದುವರೆಗೆ ಮಾನವ ಜನಾಂಗದ ಕುರಿತ ಅಗಾಧ ಬರವಣಿಗೆಗಳು ಪಾಶ್ಚಾತ್ಯ ಸಂಸ್ಕೃತಿಯ ಪೂರ್ವಗ್ರಹ ಹೊಂದಿವೆ. ಪಾಶ್ಚಾತ್ಯ ಬುದ್ಧಿಜೀವಿಗಳು, ಕೇವಲ ಸಮಾಜ ವಿಜ್ಞಾನ ಮತ್ತು ಮಾನವಿಕ ಶಾಸ್ತ್ರಗಳ ಕುರಿತಾದ ಸಿದ್ಧಾಂತಗಳನ್ನು ಮಾತ್ರ ಸೃಷ್ಟಿಸಲಿಲ್ಲ; ಅವರ ಸಂಸ್ಕೃತಿ ಜಗತ್ತನ್ನು ಇದುವರೆಗೆ ಹೇಗೆ ಗ್ರಹಿಸಿದೆ ಎನ್ನುವುದನ್ನು ತಮ್ಮ ಬರವಣಿಗೆಯ ಮೂಲಕ ಅಭಿವ್ಯಕ್ತಗೊಳಿಸಿದರು. ತಲೆಮಾರುಗಳಿಂದ ಭಾರತದ ಬುದ್ಧಿಜೀವಿಗಳು ಅವರ ವಿವರಣೆಗಳನ್ನು ಸತ್ಯವೆಂದೇ ಸ್ವೀಕರಿಸಿದಾರೆ. ಮುಂದಿನ ಪೀಳಿಗೆ ಇದರ ವಿವರಣೆಗಳ ಸತ್ಯಾಸತ್ಯತೆಗಳನ್ನು ಖಂಡಿತವಾಗಿ ಒರೆಗೆ ಹಚ್ಚುತ್ತದೆ. ಇವತ್ತಿಗೂ ಭಾರತದಲ್ಲಿ ಬಹುಪಾಲು ಜನ ಈ ರೀತಿಯ ಸಂಶೋಧನೆಯ ಕಡೆಗೆ ವಾಲುತ್ತಿದಾರೆ. ದಿನದಿನಕ್ಕೆ ಗುಣಾತ್ಮಕವಾಗಿ ಹೆಚ್ಚುತ್ತಿರುವ ಇಂತಹವರ ಸಂಖ್ಯೆ ಕೇವಲ ಬೌದ್ಧಿಕ ಆಸಕ್ತಿಗಾಗಿ ಮಾತ್ರ ಈ ಕೆಲಸವನ್ನು ಕೈಗೆತ್ತಿಕೊಂಡಿಲ್ಲ. ಇಂತಹ ಮತ್ತು ಇದಕ್ಕೆ ಸಂಬಂಧಿಸಿದಂಥ ಇತರ ಪ್ರಶ್ನೆಗಳು ಜಗತ್ತಿನ ಬೌದ್ಧಿಕವಲಯದಲ್ಲಿ ಕ್ರಾಂತಿಯ ಕಿಡಿಯನ್ನು ಹಚ್ಚುತ್ತದೆ ಎನ್ನುವ ಅರಿವು ಅವರಿಗಿದೆ.

ಭಾರತ ಮತ್ತು ಏಷ್ಯಾದ ಸಂಸ್ಕೃತಿಗಳ ಅಲ್ಪ ಸ್ವಲ್ಪ ಪರಿಚಯ ಇದ್ದರೂ ಸಾಕು ಜಗತ್ತನ್ನು ಇಲ್ಲಿನ ಸಂಸ್ಕೃತಿಗಳು ಹೇಗೆ ಗ್ರಹಿಸುತ್ತವೆ ಎಂದು ತಿಳಿಸುವ ಮಾನವ ಜನಾಂಗವನ್ನು ಕುರಿತ ಹಲವಾರು ಸಿದ್ಧಾಂತಗಳನ್ನು ಅಲ್ಲಿನ ಚಿಂತಕರೂ ಸೃಷ್ಟಿಸಿದ್ದಾರೆ ಎನ್ನುವುದು ನಮಗೆ ತಿಳಿಯುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಇದು ನಮ್ಮ ಬಗ್ಗೆಯೇ ನಾವು ಹೊಂದಬಹುದಾದ ಜ್ಞಾನ. ಹಾಗೆಯೆ ಇದು ನಮಗೆ ಏನು ತಿಳಿಯಲು ಸಾಧ್ಯ? ನಾವು ಯಾವುದರ ಬಗ್ಗೆ ಭರವಸೆ ಹೊಂದಬಹುದು? ಮತ್ತು ನಮ್ಮನ್ನು ನಾವು ಬೌದ್ಧಿಕವಾಗಿ ಮುಂದೆ ಹೇಗೆ ತೊಡಗಿಸಿಕೊಳ್ಳಬೇಕು? ಎಂಬುದರ ಜ್ಞಾನ ಕೂಡ. ಭಾರತ ಮತ್ತು ಯುರೋಪ್ ಸಂಸ್ಕೃತಿಗಳು ಒಂದಕ್ಕೊಂದು ಭಿನ್ನವಾಗಿವೆ ಹಾಗೆಯೆ ಮಾನವ ಜನಾಂಗದ ಬಗ್ಗೆ ಅವರ ದೃಷ್ಟಿಕೋನ ಕೂಡ ಭಿನ್ನವಾಗಿದೆ ಎನ್ನುವ ತಿಳಿವಳಿಕೆ ನಮಗೆ ದೊರಕುತ್ತದೆ.

ಹಾಗಾದರೆ ಈ ಶತಮಾನದ ಕೊನೆಯ ಘಟ್ಟದಲ್ಲಿ ಮಾನವ ಜನಾಂಗದ ಕುರಿತು ಸಿದ್ಧಾಂತಗಳ ಎರಡು ಗುಂಪುಗಳಿರುತ್ತವೆ. ಒಂದು ಪಾಶ್ಚತ್ಯ ಜಗತ್ತು ಉತ್ಪಾದಿಸಿದ್ದು ಮತ್ತೊಂದು ಭಾರತ ಮತ್ತು ಏಷ್ಯಾ ಅಭಿವೃದ್ಧಿಪಡಿಸಿದ್ದು. ಇವೆರಡರಲ್ಲಿ ಒಂದು ಮಾತ್ರ ಸತ್ಯವಾಗುತ್ತದೆ ಅಥವಾ ಎರಡೂ ಸುಳ್ಳಾಗುತ್ತವೆ. ಏನಾದರಾಗಲಿ, ಅದು ನಾಳೆಗೆ ಸಂಬಂಧಿಸಿದ ವಿಷಯ.